# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 754

ಸದಸ್ಯರ ಹೆಸರು : ಶ್ರೀ ಹೆಚ್. ಎಂ. ರಮೇಶ ಗೌಡ

ಉತ್ತರಿಸುವ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು

ಉತ್ತರಿಸುವ ದಿನಾಂಕ : 25-09-2020

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ. | ಲಾಕ್‌ಡೌನ್ ಸಂದರ್ಭದಲ್ಲಿ ಸಾರಿಗೆ ಸೇವೆ ಸ್ಥಗಿತಗೊಂಡಿದ್ದಾಗ ಸಾರಿಗೆ ನೌಕರರು ಅನುಭವಿಸಿದ ಸಂಕಷ್ಟಗಳು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಯಾವ ಕ್ರಮ ಕೈಗೊಳ್ಳಲಾಗಿದೆ; | ಲಾಕ್‌ಡೌನ್ ಸಂದರ್ಭದಲ್ಲಿ ಸಾರಿಗೆ ಸೇವೆ ಸ್ಥಗಿತಗೊಂಡಿದ್ದು ಸಾರಿಗೆ ಸಂಸ್ಥೆಗಳ ನೌಕರರ ವೇತನ ಪಾವತಿಸಲು ಕಷ್ಟಸಾಧ್ಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.<br><br>ಸದರಿ ಸಂಕಷ್ಟವನ್ನು ಪರಿಹರಿಸಲು ಸರ್ಕಾರವು ಏಪ್ರಿಲ್-2020ರಲ್ಲಿ ರೂ.325.01 ಕೋಟಿಗಳು ಮತ್ತು ಮೇ-2020ರಲ್ಲಿ ರೂ. 325.005 ಕೋಟಿಗಳ ವಿಶೇಷ ಅನುದಾನವನ್ನು ಸಂಪೂರ್ಣ ವೇತನ ಭರಿಸಲು ಹಾಗೂ ಜೂನ್ & ಜುಲೈ-2020ರ ಮಾಹೆಗಳಲ್ಲಿ ರೂ.426.00 ಕೋಟಿಗಳು ಹಾಗೂ ಆಗಸ್ಟ್ ಮತ್ತು ಸೆಪ್ಟೆಂಬರ್-2020ರ ಮಾಹೆಗಳಲ್ಲಿ ರೂ.423.065 ಕೋಟಿಗಳನ್ನು ಸಾರಿಗೆ ನೌಕರರ ಮೂಲವೇತನ ಮತ್ತು ತುಟ್ಟಿಭತ್ಯೆಯ ಶೇ.75ರಷ್ಟನ್ನು ಭರಿಸಲು ಬಿಡುಗಡೆ ಮಾಡಲಾಗಿದ್ದು, ಉಳಿದ ವೇತನ ವೆಚ್ಚವನ್ನು ಸಾರಿಗೆ ಸಂಸ್ಥೆಗಳ ಆಂತರಿಕ ಸಂಪನ್ಮೂಲದಿಂದ ಭರಿಸಲಾಗಿದೆ. |
| ಆ. | ಸಾರಿಗೆ ನೌಕರರಿಗೆ ಪೂರ್ಣ ವೇತನ ಪಾವತಿಯಾಗಿಲ್ಲ ಎನ್ನುವ ಕೂಗು ಕೇಳಿ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಪೂರ್ಣ ವೇತನ ಪಾವತಿಗೆ ಸರ್ಕಾರ ಗಮನ ಹರಿಸುತ್ತದೆಯೇ; | ಲಾಕ್‌ಡೌನ್ ಸಂದರ್ಭದಲ್ಲಿ ಸಾರಿಗೆ ವ್ಯವಸ್ಥೆ ಸ್ಥಗಿತಗೊಂಡಿದ್ದರೂ ಸಹ ಏಪ್ರಿಲ್-2020ರ ಮಾಹೆಯಿಂದ ಆಗಸ್ಟ್-2020 ಮಾಹೆಯವರೆಗೆ ಸರ್ಕಾರದಿಂದ ಅನುದಾನವನ್ನು ಬಿಡುಗಡೆಗೊಳಿಸಿ ನೌಕರರಿಗೆ ಪೂರ್ಣ ವೇತನ ಪಾವತಿ ಮಾಡಲಾಗಿರುತ್ತದೆ. |
| ಇ. | ಸಾರಿಗೆ ನೌಕರರ ವೇತನ ಸಮಸ್ಯೆಗೆ ಸರ್ಕಾರದ ಮುಂದೆ ಇರುವ ಶಾಶ್ವತ ಪರಿಹಾರಗಳೇನು; (ವಿವರ ನೀಡುವುದು) | ಕೊರೋನಾ ಹಿನ್ನಲೆಯಲ್ಲಿ ಸಾರಿಗೆ ನಿಗಮ/ಸಂಸ್ಥೆಗಳು ಆರ್ಥಿಕ ಸಂಕಷ್ಟದಲ್ಲಿದ್ದು ಸರ್ಕಾರದಿಂದ ಏಪ್ರಿಲ್-2020ರ ಮಾಹೆಯಿಂದ ಸೆಪ್ಟಂಬರ್-2020ರವರೆಗಿನ ಅನುದಾನವನ್ನು ಬಿಡುಗಡೆಗೊಳಿಸಿ ನೌಕರರಿಗೆ ವೇತನ ಪಾವತಿ ಮಾಡಲಾಗಿದೆ.<br><br>ಲಾಕ್‌ಡೌನ್ ತೆರವುಗೊಳಿಸಿದ ನಂತರ ಹಂತ ಹಂತವಾಗಿ ವಾಹನಗಳ ಕಾರ್ಯಚರಣೆಯು ಸಹಜ ಸ್ಥಿತಿಗೆ ಮರಳುತ್ತಿದ್ದು, ಸಂಗ್ರಹವಾಗುವ ಸಾರಿಗೆ ಆದಾಯದಿಂದ ವೇತನ ಪಾವತಿಸಲು ಕ್ರಮ ವಹಿಸಲಾಗುತ್ತದೆ. |

| | | |
|---|---|---|
| ಈ. | ಸಾರಿಗೆ ನಿಗಮವೇ ಸಾರಿಗೆ ನೌಕರರಿಗೆ ಒಂದು ವರ್ಷ ವೇತನ ರಹಿತ ರಜೆ ಮಂಜೂರು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಯಾವ ಕಾರಣಕ್ಕಾಗಿ ನಿಗಮ ಹೀಗೆ ಮಾಡುತ್ತಿದೆ; (ಸಂಪೂರ್ಣ ವಿವರ ನೀಡುವುದು) | ಇಂತಹ ಯಾವುದೇ ಪ್ರಸ್ತಾವನೆ ಪರಿಶೀಲನೆಯಲ್ಲಿರುವುದಿಲ್ಲ. |
| ಉ. | ಸಾರಿಗೆ ನೌಕರರು ಇತ್ತೀಚಿನ ದಿನಗಳಲ್ಲಿ ದಿನನಿತ್ಯ ಆತ್ಮಹತ್ಯೆಗೆ ಶರಣಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಗಮನಕ್ಕೆ ಬಂದಿದ್ದಲ್ಲಿ, ಈ ನೌಕರರ ಸರಣಿ ಆತ್ಮಹತ್ಯೆ ತಪ್ಪಿಸಲು ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ? | ನಿಗಮ/ಸಂಸ್ಥೆಗಳ ಆಡಳಿತಾತ್ಮಕ/ಇಲಾಖಾ ವಿಚಾರಗಳ ಕಾರಣದಿಂದಾಗಿ ಯಾವುದೇ ನೌಕರರು ಇತ್ತೀಚಿನ ದಿನಗಳಲ್ಲಿ ಆತ್ಮಹತ್ಯೆಗೆ ಶರಣಾಗಿರುವ ವರದಿಯಾಗಿರುವುದಿಲ್ಲ.<br><br>ಉಳಿದಂತೆ, ಜನವರಿ 2020ರಿಂದ ಇಲ್ಲಿಯವರೆಗೆ ಒಟ್ಟು 8 ನೌಕರರು ಅವರ ವೈಯಕ್ತಿಕ/ಕೌಟುಂಬಿಕ ಸಮಸ್ಯೆಗಳ ಕಾರಣದಿಂದ ಆತ್ಮಹತ್ಯೆ ಮಾಡಿಕೊಂಡಿರುವುದು ವರದಿ ಆಗಿರುತ್ತದೆ. |

ಸಂಖ್ಯೆ: ಟಿಡಿ 156 ಟಿಸಿಕ್ಯೂ 2020

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯ ಮಂತ್ರಿಗಳು ಹಾಗೂ
ಸಾರಿಗೆ ಸಚಿವರು